ಅವಿಸ್ಮರಣೀಯ ಕೃತಿ :

ಕನ್ನಡಿಗನ ಸರ್ವಸ್ವ ಅಥವಾ ಸಂಯುಕ್ತ ಕರ್ನಾಟಕ ಪ್ರಾಂತ.—1924

ಲೇಖಕರು ಮತ್ತು ಪ್ರಕಾಶಕರು :—ಆರ್. ಬಿ. ಕುಲಕರ್ಣಿ, ಕಾವ್ಯರತ್ನ, ಬೆಳಗಾವಿ
ಕರ್ನಾಟಕ ನವಜೀವನ ಗ್ರಂಥಮಾಲೆ ಗ್ರಂಥ—1.

" ಅಭಿಮಾನವಿಲ್ಲದ ಮನುಷ್ಯನು ತನ್ನ ಯೋಗ್ಯತೆಯನ್ನು ತಿಳಿಯದವನಾಗಿರುತ್ತಾನೆ. ಆದ್ದರಿಂದ ರಾಷ್ಟ್ರೀಯ ಭಾವನೆಗಳಿಗೆ ಅಭಿಮಾನವೇ ಮೂಲ. ತಾನು ಯಾರು ? ತನ್ನ ನಾಡು ಯಾವುದು ? ತನ್ನ ಬಾಂಧವರು ಯಾರು ? ನಾಡಿನ ನುಡಿಯ ಬಗ್ಗೆ ತನ್ನ ಕರ್ತವ್ಯ ವೇನು ? / ಕರ್ನಾಟಕದ ಈ ದುರ್ದೆಸೆಯ ಕಾಲದಲ್ಲಿ ನಮಗೆ ಏನಾದರೂ ವಿಶಿಷ್ಟವಾದ ಕರ್ತವ್ಯವು ಇರುವದೋ ಹೇಗೆ ? ಇವೇ ಮೊದಲಾದ ಪ್ರಶ್ನೆಗಳನ್ನು ಹಗಲಿರುಳು ತನ್ನ ಮನಸ್ಸಿನಲ್ಲಿ ವಿಚಾರಿಸುತ್ತಾ ಹೋದರೆ ಒಮ್ಮಿಲ್ಲೊಮ್ಮೆ ಸ್ವಾರ್ಥವನ್ನು ತ್ಯಜಿಸಿ, ದೇಶಕ್ಕಾಗಿ ಆತ್ಮವನ್ನು ಆಹುತಿಗೈಯಲು ಪ್ರವೃತ್ತನಾಗುವನು. ಕರ್ನಾಟಕ ಪ್ರಾಂತವು ತುಂಡು ತುಂಡಾಗಿ ಹೋಗಿರುವುದರಿಂದ, ಯಾವ ಪ್ರಾಂತದಿಂದ ನಮ್ಮ ರಾಷ್ಟ್ರೀಯ ಭಾವನೆಯು ಜಾಗೃತವಾಗ ತಕ್ಕದ್ದೋ ಅದೇ ಇಲ್ಲದ್ದರಿಂದ ಹೊಡೆದತ್ತ ಹೋಗುವ ಕುರಿಗಳಂತೆ ಕನ್ನಡಿಗರ ಸ್ಥಿತಿ ಯಾಗಿದೆ."

1924ರಲ್ಲಿ ಪ್ರಕಟವಾದ "ಕನ್ನಡಿಗನ ಸರ್ವಸ್ವ ಅಥವಾ ಸಂಯುಕ್ತ ಕರ್ನಾಟಕ ಪ್ರಾಂತ" ಎಂಬ ಪುಸ್ತಕದಿಂದ ಮೇಲಿನ ಮಾತುಗಳನ್ನು ಉದ್ಧರಿಸಲಾಗಿದೆ. ಏಕೀಕರಣದ ಕಲ್ಪನೆಯು ಕೇವಲ ವೇದಿಕೆಯ ಭಾಷಣ ಮತ್ತು ಗೊತ್ತುವಳಿಗಳ ಸ್ವರೂಪದಲ್ಲಿ ತೇಲಾಡುತ್ತಿದ್ದ ಸಮಯ ದಲ್ಲಿ, ಖಚಿತವಾದ ಒಂದು ಯೋಜನೆಯ ರೀತಿಯಲ್ಲಿ ನಾಡಿನ ಎದುರು ಮಂಡಿಸಿದ ಕೀರ್ತಿ ಈ ಪುಸ್ತಕದ ಲೇಖಕರಿಗೆ ಸಲ್ಲಬೇಕಾಗಿದೆ.

ಇದನ್ನು ಬರೆದು ಪ್ರಕಟಿಸಿದವರು ಬೆಳಗಾವಿಯಲ್ಲಿ ಶಿಕ್ಷಕರಾಗಿದ್ದ ರಾವಜಿಬಾಳಾಜಿ ಕುಲಕರ್ಣಿ. ಪುಣೆಯ ಪ್ರಸಿದ್ಧ ಸಾಹಿತಿಗಳಾಗಿದ್ದ ವಾಮನ ಮಲ್ಲಾರ ಜೋಶಿಯವರ ಬಳಿ ಯಲ್ಲಿ ಓದಿ ಪಾಲಿ, ಸಂಸ್ಕೃತ ಭಾಷೆಗಳನ್ನು ಕಲಿತು ಕಲಕತ್ತೆಯ ನಿಖಿಲ ಭಾರತ ಸಾಹಿತ್ಯ ಸಂಘದ ' ಕಾವ್ಯರತ್ನ ' ಪ್ರಶಸ್ತಿ ಪಡೆದರು. 1920 ರಿಂದ 1925ರ ವರೆಗೂ ಬೆಳಗಾವಿಯ ಕನ್ನಡ ಸಾಹಿತ್ಯ ಚಟುವಟಿಕೆಗಳಿಗೆ ಆಧಾರವಾಗಿದ್ದರು; ಎಂದಿಗೂ ಎಲೆ ಮರೆಯ ಕಾಯಿ, ಪತ್ರಿಕೆಗಳಿಗೆ ಅಜ್ಞಾತ ಲೇಖಕರು.

'ಕನ್ನಡಿಗನ ಸರ್ವಸ್ವವು' ಆ ವಿಷಯದ ಪ್ರಥಮ ಕೃತಿ ಮಾತ್ರವೇ ಅಲ್ಲ; ಏಕೀಕರಣ ಪ್ರಶ್ನೆಯ ಕೂಲಂಕಷ ವಿವರಣೆಯೂ ಆಗಿದೆ. ಭಾರತದ ಆಡಳಿತ, ಸಂವಿಧಾನ, ಆಯ ವ್ಯಯ ಭಾಷಾನ್ವಯ ಪ್ರಾಂತನಿರ್ಮಾಣದಲ್ಲಿ ಬಂಗಾಲ, ಓಡಿಸಾ, ಆಂಧ್ರ ಜನತೆಯ ಜಳುವಳಿ-ಇವೆಲ್ಲವುಗಳ ಮನನದಿಂದ ಕರ್ನಾಟಕದ ಸಮಸ್ಯೆಯನ್ನು ಪರಿಶೀಲಿಸಲಾಗಿದೆ. ಭಾಷಾ ಸಂಸ್ಕೃತಿಯ ಆಡಿಗಲ್ಲಿನ ಮೇಲೆ ಭೋಗೋಲಿಕ ಸಂಲಗ್ನತೆ, ಆಡಳಿತ ಸೌಲಭ್ಯ, ಆರ್ಥಿಕ ಸುಭದ್ರತೆಯುಳ್ಳ ಸ್ವತಂತ್ರ ಕರ್ನಾಟಕ ಪ್ರಾಂತದ ಸೌಧವನ್ನು ಲೇಖಕರು ನಿರ್ಮಿಸಿದ್ದಾರೆ. 1924 ರಿಂದ 56ರ ವರೆಗಿನ ಅವಧಿಯಲ್ಲಿ ಹಲವಾರು ರಾಜಕೀಯ ಬದಲಾವಣೆಯಾಗಿವೆ. ಕೇವಲ ಬ್ರಿಟಿಶ್ ಆಡಳಿತೆಯ ಕನ್ನಡಭಾಗಗಳ ಏಕೀಕರಣವನ್ನು ಅವರು ಸೂಚಿಸಿದ್ದರೆ ದೇಶೀಯ ಸಂಸ್ಥಾನಗಳ ವಿಲಯನದ ಪರಿಣಾಮವಾಗಿ ವಿಶಾಲ ಕರ್ನಾಟಕವು ನಿರ್ಮಾಣವಾಗಿದೆ ಈಗ.

ಬೇರೆ ಬೇರೆ ಆಡಳಿತಗಳಲ್ಲಿ ಕನ್ನಡಿಗರು ಅಲ್ಪ ಸಂಖ್ಯಾತರಾಗಿದ್ದು ಅವನತಿಯಂ ಪಥದಲ್ಲಿದ್ದಾರೆ. ಅವರ ಶೈಕ್ಷಣಿಕ, ಔದ್ಯೋಗಿಕ ಪ್ರಗತಿಗೆ ಕರ್ನಾಟಕ ಏಕೀಕರಣವೊಂದೇ ಪರಮಸಾಧನ. "ಕೇವಲ ಗ್ರಂಥಪ್ರಸಾರದಿಂದ ಬೇರೆ ಕಡೆಗೆ ಸಿಡಿದು ಬಿದ್ದ ಕನ್ನಡ ಜಿಲ್ಲೆಗಳು ಜಾದೂಗಾರನ ಮಾಟದಂತೆ ಒಟ್ಟುಗೂಡಲಾರವು. ಕರ್ನಾಟಕದ ಅಭ್ಯುದಯಕ್ಕೆ ಕರ್ನಾಟಕ ಪ್ರಾಂತವನ್ನು ಪಡೆಯುವದೊಂದೇ ತರಣೋಪಾಯವು. ಇದು ಸಾವಿತ್ರಿಯ ವರದಂತೆ ಇದೆ. ಇದೊಂದು ಕೈಗೂಡಿದರೆ ಎಲ್ಲವೂ ತಾವೇ ಕೈಗೂಡುವುವು. ಆದ್ದರಿಂದ ಇದು ಪ್ರತಿಯೊಬ್ಬ ಕನ್ನಡಿಗನ ಸರ್ವಸ್ವವಾಗಿರುವುದು. ಈ ವಿಷಯವನ್ನು ಸಾದ್ಯಂತವಾಗಿ ಚರ್ಚಿಸಿದ ಈ ಗ್ರಂಥಕ್ಕೆ ಕನ್ನಡಿಗನ ಸರ್ವಸ್ವವೆಂದೇ ಹೆಸರಿಟ್ಟಿದೆ."

ಏಕೀಕರಣದ ಚರಿತ್ರೆಯಲ್ಲಿ ಇದೊಂದು ಮುಖ್ಯ ಕೃತಿ, ಆವರ ಸ್ಮರಣೆ ನಮ್ಮ ಕರ್ತವ್ಯ.

—ವೆಂಕಟೇಶ ಸಾಂಗಲಿ.